ಶ್ರೀ ಹೆಚ್. ಏಕಾಂತಯ್ಯ : ತುಮಕೂರು ಜಿಲ್ಲೆಗೆ ಜಾಸ್ತಿ ಚಿತ್ರದುರ್ಗಕ್ಕೆ ಕಡಿಮೆ ಟಾರ್ಗೆಟ್ ಏತಕ್ಕಾಗಿ ಫಿಕ್ಸ್ ಮಾಡಿದ್ದೀರಿ? ಎಲ್ಲಾ ತಾಲ್ಲೂಕುಗಳಿಗೂ ಕೆಲವು ನಾರ್ಮ್ಸ್ ಇಟ್ಟುಕೊಂಡು ಹಂಚಬಹುದಾಗಿತ್ತಲ್ಲ.

ಶ್ರೀ ಸಿ. ಬೈರೇಗೌಡ : ಈ ಸ್ಕೀಮ್ ಇರತಕ್ಕಂಥಾದ್ದು ನಿರುದ್ಯೋಗಿಗಳಿಗಾಗಿ. ಅದನ್ನು ಕೊಡುವಾಗ ಬ್ಯಾಂಕ್ ಹೆಚ್ಚು ಇರುವಲ್ಲಿ ಹೆಚ್ಚು ಜನರಿಗೆ ಕೊಡುತ್ತೇವೆ ಅಂದರೆ ಅದು ಸರಿಯಲ್ಲ... ಹಾಗೆ ಮಾಡಿದರೆ ಆ ಕಾರ್ಯಕ್ರಮಕ್ಕೆ ಅರ್ಥವೂ ಇಲ್ಲ. ನಿರುದ್ಯೋಗಿಗಳು ಹೆಚ್ಚು ಇರುವ ಕಡೆಗೆ ಹೆಚ್ಚು ಕೊಟ್ಟರೆ ಮಾತ್ರ ಒಂದು ಅರ್ಥ ಬರುತ್ತದೆ. ನಾನು ಸರಕಾರದವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ನಿರುದ್ಯೋಗಿಗಳಿಗೆ ಸರಿಸಮಾನವಾದಂಥ ರೀತಿಯಲ್ಲಿ ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ : ಟಾರ್ಗೆಟ್ ಫಿಕ್ಸ್ ಮಾಡುವಾಗ ನಿರುದ್ಯೋಗಿಗಳ ಸಂಖ್ಯೆ ಆಧಾರವಾಗಿರಬೇಕು. ಸಂಬಂಧಪಟ್ಟ ಸವಲತ್ತುಗಳು ಇರಬೇಕು, ಇವೇ ಮುಂತಾದ ಎಲ್ಲಾ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಜಾರಿಗೆ ತರುವ ವಿಚಾರ ಸರಕಾರಕ್ಕೆ ಇದೆಯೇ?

ಅಧ್ಯಕ್ಷರು : ಮಾನ್ಯ ಸಚಿವರು ಈ ಕುರಿತಾಗಿ ಸೋಮವಾರ ದಿನ ಯಾವ ಆಧಾರದ ಮೇಲೆ ತಾವುಗಳು ಇದನ್ನು ಜಾರಿ ಮಾಡುತ್ತೀರಿ ಎಂಬ ಬಗ್ಗೆ ಒಂದು ವಿವರಣೆಯನ್ನು ಕೊಡಲಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಅಧ್ಯಕ್ಷರೇ, ಇದು ಕೇವಲ ತುಮಕೂರು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಕಡೆಗಳಲ್ಲಿಯೂ ತಾರತಮ್ಯವಾಗಿದೆ. ಅದಕ್ಕೆ ಯಾವುದಾದರೂ ಒಂದು ನೀತಿಯನ್ನು ನಿಗದಿಪಡಿಸಬೇಕು.

ಅಧ್ಯಕ್ಷರು : ನಾನು ಮಾನ್ಯ ಸಚಿವರಿಗೆ ಆ ಬಗ್ಗೆ ವಿವರಗಳನ್ನು ಸೋಮವಾರ ದಿನದಂದು ಕೊಡಲು ಹೇಳಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಮಾನ್ಯ ಸ್ನೇಹಿತ ಸದಸ್ಯರುಗಳು ಹೇಳಿದ ಹಾಗೆ ಟಾರ್ಗೆಟ್ ಫಿಕ್ಸ್ ಮಾಡುವಲ್ಲಿ ಸಾಕಷ್ಟು ಹೆಚ್ಚು ಕಡಿಮೆಯಾಗಿದೆ. ಒಂದು ಕಡೆ ಹತ್ತು, ಇನ್ನೊಂದು ಕಡೆ 15, ಮತ್ತೊಂದು ಕಡೆ 5, ಮಗದೊಂದು ಕಡೆ 3 ಹೀಗೆ ಕೊಡುತ್ತಾ ಬಂದಿರುವುದರಿಂದ ತಾರತಮ್ಯವಾಗಿದೆ. ತಮಗೆ ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ. ಅದಕ್ಕಿಂತಲೂ ಹೆಚ್ಚಿನ ವಿಚಾರ ಅಂದರೆ ಬ್ಯಾಂಕ್‌ಗಳು ಈ ಬಗ್ಗೆ ಕೋ-ಆಪರೇಟ್ ಮಾಡುತ್ತಾ ಇಲ್ಲ. ನಿಮ್ಮ ಜನರಲ್ ಮ್ಯಾನೇಜರ್ ಡಿಐಸಿ ಯವರು ಲೋನ್ ಸ್ಯಾಂಕ್ಷನ್ ಮಾಡಿ ಕಳುಹಿಸಿದರೂ ಕೂಡ ಸ್ಯಾಂಕ್ಷನ್ ಮಾಡುತ್ತಾ ಇಲ್ಲ. ಸರಕಾರಕ್ಕೆ ಇದನ್ನು ಕಂಟ್ರೋಲ್ ಮಾಡಲು ಏನು ವಿಲ್‌ಪವರ್ ಇದೆ? ಎಷ್ಟು ಜನರಿಗೆ ನೀವು ಸಹಾಯ ಮಾಡಿದ್ದೀರಿ? ಅದರ ಬಗ್ಗೆ ವಿವರಗಳನ್ನು ಹೇಳಿ?

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

### ರಾಜ್ಯದಲ್ಲಿ ಅಕ್ರಮ ಸಾಗುವಳಿಯನ್ನು ಖಾಯಂ ಮಾಡುವುದು

233 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಅಕ್ರಮ ಸಾಗುವಳಿಯನ್ನು ಖಾಯಂ ಮಾಡಲು ಬಂದಿರುವ ಅರ್ಜಿಗಳು ಎಷ್ಟು?*

*ಆ) ದರಲ್ಲಿ ಎಷ್ಟು ಜನರಿಗೆ ಸಕ್ರಮಗೊಳಿಸಿ ಸಾಗುವಳಿ ಚೀಟಿ ನೀಡಲಾಗಿದೆ?*

*ಇ) 1984-85ನೇ ಸಾಲಿನಲ್ಲಿ ಕಂದಾಯ ಇಲಾಖೆಯ ರಿಜಿಸ್ಟ್ರಿನಲ್ಲಿ ಸಿ ಮತ್ತು ಡಿ ಜಮೀನನ್ನು ಸಾಗುವಳಿ ಮಾಡಿರುವುದನ್ನು ಪರಿಗಣಿಸದೆ ಫಾರೆಸ್ಟ್ ಎಂದು ಬರೆದಿರುವ ಬಗ್ಗೆ ಕಾರಣವೇನು?*

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 10,86,826

ಆ) 1,55,203

ಇ) ವಸೀಕರಣಕ್ಕೋಸ್ಕರವಾಗಿ ಸುಮಾರು 18 ಲಕ್ಷ ಎಕರೆ ಸಿ ಮತ್ತು ಡಿ ವರ್ಗದ ಜಮೀನನ್ನು 1978ರಿಂದ 1982ರವರೆಗೆ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಆ ನಂತರ ಸಾಗುವಳಿಗೆ ಯೋಗ್ಯವಾದ ಮತ್ತು ಬಗರ್ ಹುಕುಂ ಸಾಗುವಳಿಯಲ್ಲಿರುವ ಜಮೀನನ್ನು ಸಹ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತೆಂಬುದು ಸರ್ಕಾರದ ಗಮನಕ್ಕೆ ಬಂದಾಗ, ಸುಮಾರು 16,32 ಲಕ್ಷ ಎಕರೆಯಷ್ಟು ಜಮೀನನ್ನು ದಿನಾಂಕ 3-1-91ರ ಸರ್ಕಾರಿ ಆದೇಶದಂತೆ ಅರಣ್ಯ ಇಲಾಖೆಯಿಂದ ವಾಪಸ್ಸು ಪಡೆಯಲಾಯಿತು. (ಉಳಿದ 1.68 ಲಕ್ಷ ಜಮೀನಿನಲ್ಲಿ ಅದಕ್ಕೆ ಮುಂಚೆಯೇ ಅರಣ್ಯವನ್ನು ಬೆಳೆಸಿ ಅವುಗಳನ್ನು "ಕಾಯ್ದಿಟ್ಟ ಅರಣ್ಯ" ಎಂದು ಘೋಷಿಸಿ ಅರಣ್ಯ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿತ್ತು) ತದನಂತರ ಅರಣ್ಯ ಇಲಾಖೆಯ ಮನವಿಯಂತೆ ಸರ್ಕಾರವು ದಿನಾಂಕ : 7-6-93ರಂದು 2.58 ಲಕ್ಷ ಹೆಕ್ಟೇರ್ (6.45 ಎಕರೆ) ಸಿ ಮತ್ತು ಡಿ ವರ್ಗದ ಜಮೀನನ್ನು "ಲ್ಯಾಂಡ್ ಬ್ಯಾಂಕ್‌ಗಾಗಿ"ಅರಣ್ಯ ಇಲಾಖೆಗೆ ವರ್ಗಾಯಿಸಲು ಆದೇಶಿಸಿತು. ಆದರೆ ಈ ಸಂದರ್ಭದಲ್ಲಿ ಸರ್ಕಾರವು, ಆ ರೀತಿ ಅರಣ್ಯ ಇಲಾಖೆಗೆ ವರ್ಗಾಯಿಸಿದ ಜಮೀನುಗಳು ಒತ್ತುವರಿಯಿಂದ ಮುಕ್ತವಾಗಿರಬೇಕೆಂದು ಸ್ಪಷ್ಟವಾಗಿ ಆದೇಶಿಸಿದೆ.

**ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳು**

1 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹೊಸದಾಗಿ 60 ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀಮತಿ ಮನೋರಮ ಮಧ್ವರಾಜ್ (ಮಹಿಳಾ ಮತ್ತು ಶಿಶು ಅಭಿವೃದ್ಧಿ ಸಚಿವರು) :

ಅ) ಹೌದು

ಆ) ಸೋಮವಾರಪೇಟೆಗೆ 56 ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ದಿನಾಂಕ 1-8-94ರ ಸರ್ಕಾರಿ ಆದೇಶ ಸಂಖ್ಯೆ : ಸಕಇ 282 ಐಸಿಡಿ 93ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯು ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸುವುದು.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, 26-8-94 ರಂದು ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿಯಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.